

ಬಿಎಸ್‌ಇ (ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್) ಕಟ್ಟಡ

ಕಂಪ್ಯೂಟರ್ ಮತ್ತು ಮೊಬೈಲ್ ಆ್ಯಪ್‌ಗಳನ್ನು ಚೆನ್ನಾಗಿ ಬಳಸಿ ರೂಢಿಯಿರುವವರಿಗೆ ಅತ್ಯುನ್ನತ ತಂತ್ರಜ್ಞಾನದ ಬೆಂಬಲವಿರುವ ಬ್ರೋಕರೇಜ್ ಫರ್ಮ್‌ಗಳ ಮೂಲಕ ಸ್ವತಂತ್ರವಾಗಿ ವಹಿವಾಟು ನಡೆಸುವುದು ಸುಲಭವೆನ್ನಿಸುತ್ತಿದೆ. ಬ್ಯಾಂಕ್‌ಗಳ ಬಡ್ಡಿದರ ಐತಿಹಾಸಿಕ ಕನಿಷ್ಠಮಟ್ಟದಲ್ಲಿದೆ. ಈ ಎಲ್ಲ ಕಾರಣಗಳಿಂದ ಷೇರುಪೇಟೆಯಲ್ಲಿ ಚಿಲ್ಲರೆ ಹೂಡಿಕೆದಾರರ ಖಾತೆಗಳು ಹೆಚ್ಚಾಗುತ್ತಿವೆ' ಎನ್ನುವುದು ಹೂಡಿಕೆ ತಜ್ಞ ಮತ್ತು ವೈಯಕ್ತಿಕ ಹಣಕಾಸು ಸಲಹೆಗಾರರೂ ಆಗಿರುವ 'ಇನ್‌ಸ್ಪೈರ್ ಇಂಡಿಯಾ ಫೈನಾನ್ಶಿಯಲ್ ಸಲ್ಯೂಷನ್ಸ್'ನ ವ್ಯವಸ್ಥಾಪಕ ನಿರ್ದೇಶಕ ಶರಣ್ ಪಾಟೀಲ್ ಅವರ ವಿವರಣೆ.

ಬೆಳಗಾವಿಯ ಗಣೇಶ ಹೆಗಡೆ ಅವರು ಡಿಮಾಟ್ ಖಾತೆ ತೆರೆದು 10 ವರ್ಷಗಳಾಗಿತ್ತು. ಆಗಾಗ ಅಷ್ಟೋಇಷ್ಟೋ ಹಣ ಹಾಕಿ, ಒಳ್ಳೇ ಬೆಲೆ ಬಂದಾಗ ಮಾರುವುದು ಅವರ ರೂಢಿ. ಈಗ ಅವರು 'ಡೇ ಟ್ರೇಡಿಂಗ್' ಶುರು ಮಾಡಿದ್ದಾರೆ.

'ನನಗೆ ಕಂಪನಿಯೂ ಗ್ಯಾರಂಟಿಯಿಲ್ಲ, ಕಂಪನಿಗೆ ನಾನೂ ಗ್ಯಾರಂಟಿಯಿಲ್ಲ ಅನ್ನುವ ಪರಿಸ್ಥಿತಿಯಿದೆ. ವರ್ಕ್‌ಫ್ರಂ ಹೋಂ ಇರೋದ್ರಿಂದ ಬಾಸ್ ಕಿರಿಕಿರಿಯೂ ಇರಲ್ಲ. ನನ್ನ ಕೆಲಸದ ಶೆಡ್ಯೂಲ್ ಸ್ವಲ್ಪ ಬದಲಿಸಿಕೊಂಡು, ಮಾರ್ಕೆಟ್ ಕಡೆಗೆ ಹೆಚ್ಚು ಗಮನ ಕೊಡ್ತಿದ್ದೀನಿ. ಯುಟ್ಯುಬ್‌ನಲ್ಲಿ ವಿಡಿಯೊಗಳನ್ನು ನೋಡಿ ಜ್ಞಾನದ ಮಟ್ಟ ಹೆಚ್ಚಿಸಿಕೊಂಡೆ, ಅನಾಲಿಸಿಸ್ ಮಾಡೋದು ಕಲಿತೆ, ಈಗ ಪರವಾಗಿಲ್ಲ, ಷೇರುಪೇಟೆಯಿಂದ ತಕ್ಕಮಟ್ಟಿಗೆ ಸಂಪಾದನೆಯೂ ಆಗ್ತಿದೆ. ಒಂದು ವೇಳೆ ಕೆಲಸ ಹೋದ್ರೂ ಬದುಕಬಲ್ಲೆ ಅನ್ನುವಷ್ಟು ವಿಶ್ವಾಸ ಬಂದಿದೆ' ಎಂದು ಅವರು ಹೆಮ್ಮೆಯಿಂದ ಹೇಳಿಕೊಂಡರು.

ಇದೀಗ 35ರ ಹರೆಯದಲ್ಲಿರುವ ಗಣೇಶ ಹೆಗಡೆ ಅವರ ಮಾತುಗಳು ಹೊಸ ತಲೆಮಾರು ಷೇರುಪೇಟೆಯನ್ನು ಹೇಗೆಲ್ಲಾ ಪರಿಭಾವಿಸುತ್ತಿದೆ ಎನ್ನುವುದಕ್ಕೆ ದಿಕ್ಸೂಚಿಯಂತಿದೆ. ಶೂನ್ಯ ಸಿದ್ಧತೆ, ಟಿಪ್ಸ್‌ಗಳನ್ನೇ ಆಧರಿಸಿ ನಡೆಸುವ ವಹಿವಾಟು, ಶಿಸ್ತು ಮತ್ತು ಸಂಯಮವೇ ಸಂಪತ್ತು ವೃದ್ಧಿಗೆ ಆಧಾರ ಎಂಬ ಷೇರುಪೇಟೆಯ ಮೂಲ ತತ್ವವೇ ನಗಣ್ಯ ಎನ್ನುವಂಥ ಧೋರಣೆ, ಪೇಟೆಯಲ್ಲಿ ನಷ್ಟವೇ ಆಗದು ಎಂಬ ಅತಿ ಆತ್ಮವಿಶ್ವಾಸದ ದೊಡ್ಡ ಸಂಖ್ಯೆಯ ಯುವಕ ಯುವತಿಯರು ಇಂದು ಪೇಟೆಗೆ ಬಂದಿದ್ದಾರೆ.

'ಮಾರ್ಚ್ ನಂತರ ಪೇಟೆಗೆ ಬಂದವರು 'ಗೂಳಿ ಓಟ'ವನ್ನು ಅಂದರೆ ಷೇರುಪೇಟೆಯ ಏರುಗತಿಯನ್ನು ಮಾತ್ರ ನೋಡಿದ್ದಾರೆ. 'ಕರಡಿ ತುಳಿತ' ಅಂದರೆ ಷೇರುಪೇಟೆಯ ಇಳಿಮುಖ ಹೇಗಿರುತ್ತೆ ಅಂತ ಅರಿತುಕೊಳ್ಳುವ ಗೋಜಿಗೇ ಅವರು ಹೋಗಿಲ್ಲ. ಹೊಸದಾಗಿ ಪೇಟೆಗೆ ಬರುವವರಲ್ಲಿ ನನಗೆ ಕಾಣಿಸುತ್ತಿರುವ ದೊಡ್ಡ ಅಪಾಯವಿದು' ಎಂದು ಷೇರುಪೇಟೆಯ ವಿಶ್ಲೇಷಣೆ ವಿಡಿಯೊಗಳನ್ನು ಯುಟ್ಯೂಬ್‌ಗೆ ನಿಯಮಿತವಾಗಿ ಅಪ್‌ಲೋಡ್ ಮಾಡುವ ಹರ್ಷ ಗೋಯೆಲ್ ಆತಂಕ ವ್ಯಕ್ತಪಡಿಸುತ್ತಾರೆ.

## ಎಲ್ಲಿ ಓಪನ್ ಮಾಡೋದು ಡಿಮಾಟ್

ಅಧ್ಯಯನಶೀಲತೆ, ಮುನ್ನೆಚ್ಚರಿಕೆ, ಶಿಸ್ತು ಮತ್ತು ಸಂಯಮಗಳು ನಿಮ್ಮ ಸ್ವಭಾವದ ಭಾಗವಾಗಿದ್ದರೆ ಮಾತ್ರ ಷೇರುಪೇಟೆಯಲ್ಲಿ ನೀವು ದೀರ್ಘಕಾಲ ಉಳಿಯಲು ಸಾಧ್ಯ. ಅಕ್ಕಪಕ್ಕದವರು, ಸಹೋದ್ಯೋಗಿಗಳು ಮಾಡಿಸಿದರು ಎಂದು ನೀವೂ ಒಂದು ಡಿಮಾಟ್ ಖಾತೆ ತೆರೆದು 'ಡೇ ಟ್ರೇಡಿಂಗ್' ಮಾಡಲು ಹೊರಟರೆ ಹೊಸ ಸಂಪತ್ತು ನಿಮ್ಮ ಬಳಿಗೆ ಬರುವುದಿರಲಿ, ನಿಮ್ಮ ಬಳಿ ಈಗಾಗಲೇ ಇರುವ ಬಂಡವಾಳವೂ ಕರಗೀತು ಜೋಕೆ ಎನ್ನುತ್ತಾರೆ ತಜ್ಞರು.

'ನಿನ್ನನ್ನು ನೀನು ಅರಿತುಕೊ, ಎಲ್ಲಿ ಹೆಜ್ಜೆ ಇಡುತ್ತಿದ್ದೀ ಎಂದು ಅರ್ಥ ಮಾಡಿಕೊಂಡ ನಂತರವೇ ಹೆಜ್ಜೆಯಿಡು, ಬಸ್ ಹತ್ತಿದ ಮೇಲೆ ಯಾವ ಊರಿಗೆ ಹೋಗಬೇಕು ಅಂತ ನಿರ್ಧರಿಸಬೇಡ, ಎಲ್ಲಿಗೆ ಹೋಗಬೇಕು ಅಂತ ಮೊದಲು ನಿರ್ಧರಿಸಿ ಅಂಥದ್ದೇ ಬಸ್ ಹುಡುಕಿ ಹತ್ತು' ಎನ್ನುವುದು ಷೇರುಪೇಟೆಯಲ್ಲಿ ಬಹುಕಾಲ ವಹಿವಾಟು ನಡೆಸಿ ಧ್ಯಾನಸ್ಥ ಸ್ಥಿತಿ ಮುಟ್ಟಿರುವ ಹೂಡಿಕೆದಾರರು ನೀಡುವ ಉಪನ್ಯಾಸ.

'ಡಿಮಾಟ್ ಅಕೌಂಟ್ ತೆರೆಯುವುದು ಪೇಟೆ

**ನಿಯಮಿತ ಹೂಡಿಕೆಯ ಶಿಸ್ತು ಮಾತ್ರವೇ ಷೇರುಪೇಟೆಯಲ್ಲಿ ನಿಮ್ಮನ್ನು ಗೆಲ್ಲಿಸಬಲ್ಲದು**



## ಷೇರು ಗುಚ್ಛಗಳು

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್ ಫಂಡ್‌ಗಳ ಗುಚ್ಛಗಳನ್ನು ರೂಪಿಸಿಕೊಂಡು ಎಸ್‌ಐಪಿ ಆರಂಭಿಸುವುದು ವಾಡಿಕೆ. ಈಗ ಬಹುತೇಕ ಎಎಂಸಿಗಳು ನಿರ್ದಿಷ್ಟ ಕ್ಷೇತ್ರಗಳಲ್ಲಿ ವಹಿವಾಟು ನಡೆಸುವ ಕಂಪನಿಗಳ ಷೇರುಗಳ ಗುಚ್ಛವನ್ನೇ ರೂಪಿಸಿಕೊಡುತ್ತಿವೆ. ಇಂಥ ಷೇರುಗಳನ್ನು ಎಸ್‌ಐಪಿ ಮಾದರಿಯಲ್ಲಿ ಖರೀದಿಗೆ ಆರ್ಡರ್ ಹಾಕುವ ಅವಕಾಶವನ್ನೂ ಕಲ್ಪಿಸಿವೆ. ದೀರ್ಘಾವಧಿ ಸಂಪತ್ತು ವೃದ್ಧಿಗಾಗಿ ಷೇರುಪೇಟೆಗೆ ಬರುವವರಿಗೆ ಇದು ಉತ್ತಮ ಆಯ್ಕೆ.